ಕರ್ನಾಟಕ ಸರ್ಕಾರ                                                                 ಸಿ ಆರ್ ಪಿ 67
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

<u>ಅಪರ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು</u>

<u>CC No.534/2015        PW-1</u>

| | | |
|---|---|---|
| ಹೆಸರು | : | ಸಿದ್ದಲಿಂಗಯ್ಯ |
| ತಂದೆಯ/ಗಂಡನ ಹೆಸರು | : | ವಿರುಪಾಕ್ಷಯ್ಯ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಎ ಎಸ್ ಐ |
| ವಾಸಸ್ಥಳ | : | ಸಿಂಧನೂರು ನಗರ ಪೋ.ಠಾ. |

(ಕಲಂ. 299 ಭಾ.ದಂ. ಪ್ರ.ಸಂ. ರಡಿಯಲ್ಲಿ ಸಾಕ್ಷಿಯ ವಿಚಾರಣೆ)

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 29-01-2025

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ</u>

ದಿಃ 20-07-2023 ರಿಂದ ಇಲ್ಲಿಯವರೆಗೆ ಸಿಂಧನೂರು ನಗರ ಪೋ.ಠಾಣೆಯಲ್ಲಿ ಎ ಎಸ್ ಐ ಎಂದು ಕೆಲಸ ನಿರ್ವಹಿಸುತ್ತಿದ್ದೇನೆ.

ಮಾನ್ಯ ನ್ಯಾಯಾಲಯದ ಆದೇಶದಂತೆ ನಾನು ಈ ಪ್ರಕರಣದ ಆರೋಪಿಯ ವಿರುದ್ದ ಉದ್ಘೋಷಣೆಯನ್ನು ಜಾರಿ ಮಾಡಲು ದಿಃ 04-10-2021 ರಂದು ಮಹಾರಾಷ್ಟ್ರ ರಾಜ್ಯದ ರಾಯಗಡ ಜಿಲ್ಲೆಯ ರೂವಾ ತಾಲೂಕಿನ ಚನ್ನೆರಾ ಗ್ರಾಮದಕ್ಕೆ ಹೋಗಿ ಅಲ್ಲಿಯ ಸ್ಥಳೀಯ ಪೋ.ಠಾಣೆಗೆ ಹೋಗಿ ಪೋಲೀಸ್ ಸಿಬ್ಬಂದಿಗಳಾದ ಗದಮಳಿ ಎಚ್ ಸಿ-208 ಮತ್ತು ಪಿಸಿ ಪಾಟೀಲ -1541 ಇವರೊಂದಿಗೆ ಚನ್ನೆರಾ ಗ್ರಾಮಕ್ಕೆ ಹೋಗಿ ಆರೋಪಿತರನ್ನು ಹುಡಿಕಾಡಲು ಆತ ತಲೆ ಮರಿಸಿಕೊಂಡಿರುತ್ತಾನೆ ಅಂತಾ ತಿಳಿದು ಬಂದಿರುತ್ತದೆ. ಆಗ ನಾವು ಅಲ್ಲಿದ್ದ ಎರಡು ಜನ ಪಂಚರಾದ ಜನಾರ್ಧನ ತಂದೆ ಯಶವಂತ ರಾಯಕರ ಮತ್ತು ಚಾರುದಾಸ ತಂದೆ ರತ್ನಾಕರ ರವರ ಸಮಕ್ಷಮ ಉದ್ಘೋಷಣೆಯ ಪ್ರತಿಯನ್ನು ಬಸ್ ನಿಲ್ದಾಣ, ತಹಶೀಲ್ದಾರ ಕಾರ್ಯಲಯ, ಪಂಚಾಯತಿ ಕಾರ್ಯಲಯ ಮತ್ತು ಆರೋಪಿ ವಾಸ ಇದ್ದ ಮನೆಗೆ ಸಾರ್ವಜನಿಕರಿಗೆ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸಿ ಉದ್ಘೋಷಣೆಯನ್ನು ಜಾರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ವರದಿ ನೀಡಿರುತ್ತೇನೆ. ಆ ಸಂದರ್ಭದಲ್ಲಿ ಭಾವಚಿತ್ರ ವನ್ನು ಸಹ ತೆಗೆದಿರುತ್ತೇನೆ ಸಾಕ್ಷಿಯು ಉದ್ಘೋಷಣೆ ಪಂಚನಾಮೆಯನ್ನು

ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿ ಸಹಿ ಮತ್ತು ಪಂಚರ ಸಹಿಗಳನ್ನು ನಿಪಿ-1 ಎ ದಿಂದ 1 ಸಿ ಎಂದು ಗುರುತಿಸಲಾಯಿತು. ಉದ್ಘೋಷಣೆಯ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ಎರಡು ಭಾವಚಿತ್ರಗಳನ್ನು ಸಾಕ್ಷಿ ನೋಡುತ್ತಿದ್ದು ಅವುಗಳಿಗೆ ಸಂಬಂಧಿಸಿದಂತೆ ಸಿಡಿ ಮತ್ತು ಪ್ರಮಾಣ ಪತ್ರ ಇಲ್ಲದೇ ಇರುವ ಕಾರಣ ನಿಶಾನೆಗೆ ಒಳಪಡಿಸಿಲ್ಲ

ಆರೋಪಿ ಹೆಸರಿನಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದು ತಹಶೀಲ್ದಾರವರು ಮತ್ತು ಪಂಚಾಯತಿಯವರು ವರದಿ ಪಡೆದಿದ್ದೇನೆ. ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಅವುಗಳು ಮರಾಠಿ ಭಾಷೆಯಲ್ಲಿರುವುದರಿಂದ ಅವುಗಳ ತರ್ಜುಮೆ ಪ್ರತಿಗಳನ್ನು ನಿಪಿ-3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಆರೋಪಿ ಪತ್ತೆ ಆಗಿರುವುದಿಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಅಪರ ಜೆ.ಎಮ್.ಎಫ್.ಸಿ., ಸಿಂಧನೂರು.